# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/2366/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:11/02/2022.

14

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ವಿಜಯಕುಮಾರ್, ಬಿನ್ ಶಂಕರ ಶಹಾಪೂರಕರ, ಗ್ರಾಮ ಲೆಕ್ಕಾಧಿಕಾರಿ, ಅಡಿಹಾಳ ಗ್ರಾಮ, (ಧನ್ನೂರು ಸಜಾ), ತಾ: ಹುನಗುಂದ, ಬಾಗಲಕೋಟೆ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಾಗಲಕೋಟೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ವಿಜಯಕುಮಾರ್, ಬಿನ್ ಶಂಕರ ಶಹಾಪೂರಕರ, ಗ್ರಾಮ ಲೆಕ್ಕಾಧಿಕಾರಿ, ಅಡಿಹಾಳ ಗ್ರಾಮ, (ಧನ್ನೂರು ಸಜಾ), ತಾ: ಹುನಗುಂದ, ಬಾಗಲಕೋಟೆ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಸಂಗಪ್ಪ ಗೌಡರ, ಬಿನ್ ಶಿವಪ್ಪ ಗೌಡರ, ಸಾ: ಇದ್ದಲಗಿ ಗ್ರಾಮ, ತಾ: ಹುನಗುಂದ, ಬಾಗಲಕೋಟೆ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬಾಗಲಕೋಟೆ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:08/2018** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಸಾ:ಇದ್ದಲಗಿ, ಅಡಿಹಾಳ ಗ್ರಾಮದ, ರಿ.ಸ.ನಂ.35/45 ಒಟ್ಟು ಕ್ಷೇತ್ರ 3-ಎಕರೆ 15-ಗುಂಟೆ ಜಮೀನು ದೂರುದಾರರು ಮತ್ತು ಅವರ ತಮ್ಮ ಬಸಪ್ಪನವರ ಹೆಸರಿಗೆ ಇದ್ದು, ಸದರಿ ಬಸಪ್ಪನವರು ಮೃತರಾಗಿದ್ದು, ಅವರ ಮಗನಾದ ಶರಣಪ್ಪ ಬಸಪ್ಪ ಗೌಡರ ಹೆಸರಿನಲ್ಲಿ ಇದ್ದು, ಇದು ಜಂಟಿಯಾಗಿದ್ದರಿಂದ ಸದರಿ ಜಮೀನನ್ನು ಪಾಲು ವಾಟ್ನಿ ಮಾಡಿಕೊಳ್ಳಬೇಕೆಂದು ದೂರುದಾರರು ಮತ್ತು ಅವರ ತಮ್ಮನ ಮಗನಾದ ಶರಣಪ್ಪ ಬಸಪ್ಪ ಗೌಡರ ಕೂಡಿ ನಿರ್ಧಾರ ಮಾಡಿ ದಿನಾಂಕ: 21/06/2018ರಂದು ಎದುರುದಾರರ ಕಚೇರಿಗೆ ಹೋಗಿ ಅರ್ಜಿ ಮತ್ತು ಬಾಂಡ್ ಕೊಟ್ಟಾಗ, ಎದುರುದಾರರು ಆಯ್ತು ಮಾಡಿಕೊಡ್ತೀನೆ ಅಂತ ಹೇಳಿ ಈ ಕೆಲಸಕ್ಕೆ 20,000/-

ರೂ.ಗಳನ್ನು ಲಂಚ ಬೇಡಿರುತ್ತಾರೆ. ಆಗ ದೂರುದಾರರು ಅಷ್ಟು ಆಗುವುದಿಲ್ಲ ಅಂತ ಚೌಕಾಶಿ ಮಾಡಿದಾಗ, ಅವರು 15,000/- ರೂ.ಗಳು ಲಂಚ ಕೊಟ್ಟರೆ ಮಾತ್ರ ಕೆಲಸ ಮಾಡಿಕೊಡುವುದಾಗಿ ಹೇಳಿ ಕಳುಹಿಸಿದರು. ಎದುರುದಾರರು ದೂರುದಾರರು ಕೊಟ್ಟ ಅರ್ಜಿಗೆ ಯಾವುದೇ ಸ್ವೀಕೃತಿ ಕೊಡಲಿಲ್ಲ. ನಂತರ ದಿನಾಂಕ: 23/06/2018ರಂದು ಮುಂಜಾನೆ 11-00 ಗಂಟೆಯ ಸುಮಾರಿಗೆ ಎದುರುದಾರರ ಕಚೇರಿಗೆ ಹೋಗಿ ಅವರನ್ನು ಬೇಟಿಯಾದಾಗ, ಅವರು ಸಾಕ್ಷಿ ಸಹಿ ಮಾಡಿಸು, ಕೆಲಸಾ ಚಾಲು ಮಾಡಬೇಕಂದ್ರ ಎಷ್ಟರ ರೊಕ್ಕಾ ಕೊಡು ಅಂತ ಹೇಳಿದರು. ಆಗ ದೂರುದಾರರು ಅವರ ಬಳಿ ಇದ್ದ 1000/- ರೂ.ಗಳು ಇದೆಯೆಂದು ಹೇಳಿದಾಗ, ಎದುರುದಾರರು ಇಲ್ಲಾ ಕನಿಷ್ಠ 10,000/- ರೂಪಾಯಿ ಕೊಡು ಕೆಲಸ ಆದ ಮೇಲೆ ಉಳಿದ ಹಣ ಕೊಡು ಅಂತ ಅಂದರು. ಆಗ ದೂರುದಾರರು ಬುಧವಾರ ಅಥವಾ ಗುರುವಾರ ದಿವಸ 5,000/- ತಂದು ಕೊಡುತ್ತೇನೆ ಎಂದಾಗ, ಎದುರುದಾರರು 8,000/- ತಂದು ಕೊಡು ಕೆಲಸಾ ಚಾಲು ಮಾಡ್ತೀನಿ ಅಂತ ಹೇಳಿದರು. ಆಗ ನಾನು 1,000/- ರೂಪಾಯಿ ಕೊಟ್ಟು ಬುಧವಾರ ದಿವಸ 7,000/- ತಂದು ಕೊಡ್ತೀನಿ ಅಂದಾಗ, ಎದುರುದಾರರು 1,000/- ತೆಗೆದುಕೊಂಡು ಬುಧವಾರ ದಿವಸ 7,000/- ರೂಪಾಯಿ ತಂದು ನಮ್ಮ ಹುಡಗನ ಕೈಯ್ಯಾಗ ಕೊಡು ನಾ ರೊಕ್ಕಾ ಮುಟ್ಟಂಗಿಲ್ಲಾ ಅಂತ ಹೇಳಿ ಶರಣಪ್ಪಗ ಕರೆಸಿ ಸಹಿ ಮಾಡಿಸು, ನಾನು ಸಾಕ್ಷಿದಾರರ ಸಹಿ ಮಾಡಿಸ್ತೀನಿ ಅಂತ ಹೇಳಿದರು. ದೂರುದಾರರು ಲಂಚದ ಹಣ ಬೇಡಿಕೆ ಇಟ್ಟ ಸಂಭಾಷಣೆಯನ್ನು ಅವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದಿನಾಂಕ: 27/06/2018 ರಂದು ಬೆಳಿಗ್ಗೆ 10-00 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಬಾಗಲಕೋಟೆ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 08/2018 ರಲ್ಲಿ ಕಲಂ 7 ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಗಂಗಾಧರ ಕಲ್ಲಪ್ಪ ಗಸ್ತಿ, (ನೆರಳು ಸಾಕ್ಷಿ) 2) ಶ್ರೀ ರಾಮಪ್ಪ ಯಲ್ಲಪ್ಪ ತರಕಾರ, ಇವರುಗಳನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ಓದಿ ಅದರಲ್ಲಿಯ ವಿಷಯವನ್ನು ತಿಳಿಸಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.2,000/- ಮುಖಬೆಲೆಯ 02-ನೋಟುಗಳು ಹಾಗೂ ರೂ.500/- ಮುಖಬೆಲೆಯ 06-ನೋಟುಗಳು) ಒಟ್ಟು 7,000/- ರೂ.ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ

ನೋಟುಗಳ ನಂ.ನ್ನು ಮತ್ತು ಮೌಲ್ಯವನ್ನು ಪಂಚ-1-ರವರು ಪರಿಶೀಲಿಸಿ ಹೇಳಿದ್ದು, ಪಂಚ-2-ರವರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ ಸಾಕ್ಷಿ-1- ಗಂಗಾಧರ ಕಲ್ಲಪ್ಪ ಗಸ್ತಿರವರು ದೂರುದಾರರ ಅಂಗ ಶೋಧನೆ ಮಾಡಿರುತ್ತಾರೆ ಹಾಗೂ ಪಂಚ-2- ರಾಮಪ್ಪ ಯಲ್ಲಪ್ಪ ತರಕಾರ ರವರು ಫಿನಾಪ್ತಲೀನ್ ಪೌಡರನ್ನು ಸವರಿದ ಹಣವನ್ನು ಎಣಿಸಿ, ನಂತರ ಸದರಿ ಹಣವನ್ನು ದೂರುದಾರರ ಧರಿಸಿದ್ದ ಮುಂಡಾದ ಹೊಟ್ಟೆಯ ಮೇಲಿನ ಕಿಸೆಯಲ್ಲಿ ಇಡಿಸಿರುತ್ತಾರೆ. ನಂತರ ಪಂಚ ಸಾಕ್ಷಿ-2- ರಾಮಪ್ಪ ಯಲ್ಲಪ್ಪ ತರಕಾರ ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ಎಲ್ಲಾ ಸಿಬ್ಬಂದಿ, ದೂರುದಾರರಿಗೆ ಹಾಗೂ ಪಂಚರಿಗೆ ಸೋಪಿನಿಂದ ಕೈತೊಳೆಯಲು ಸೂಚಿಸಿದ್ದು, ಅದರಂತೆ ಅವರೆಲ್ಲರೂ ಸೋಪಿನಿಂದ ಕೈತೊಳೆದಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿದ್ದ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್‌ಗೆ ವರ್ಗಾಯಿಸಿಕೊಂಡಿರುತ್ತಾರೆ ಹಾಗೂ ಸಂಭಾಷಣೆಯನ್ನು ಲಿಪಿಕರಣ ಮಾಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ದೂರುದಾರರಿಗೆ ಸರ್ಕಾರಿ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಸದರಿ ಸಂಭಾಷಣೆಯನ್ನು ಲ್ಯಾಪ್ ಟಾಪ್‌ಗೆ ವರ್ಗಾಯಿಸಿ ಸಿಡಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತಮ್ಮ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಲು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿ, ಅದನ್ನು ಉಪಯೋಗಿಸುವ ರೀತಿಯನ್ನು ತಿಳಿಸಿ, ಎದುರುದಾರರ ಬಳಿ ಹೋದಾಗ ಆನ್ ಮಾಡಿ ಎದುರುದಾರರೊಂದಿಗೆ ಮಾತುಗಳನ್ನು ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ: 27/06/2018ರಂದು ಬೆಳಿಗ್ಗೆ 11-10 ಗಂಟೆಯಿಂದ ಬೆಳಿಗ್ಗೆ 12-10 ಗಂಟೆಯವರಿಗೆ ಬಾಗಲಕೋಟೆ

ಎಸಿಬಿ ಕಚೇರಿಯಲ್ಲಿ ಲ್ಯಾಪ್ ಟಾಪ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iv. ಅದೇ ದಿನ ಅಂದರೆ ದಿನಾಂಕ:27/06/2018ರಂದು ಬೆಳಿಗ್ಗೆ 12-15 ಗಂಟೆಗೆ ತನಿಖಾಧಿಕಾರಿಗಳು ಪಂಚರು, ದೂರುದಾರರು ಹಾಗೂ ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ ಬಾಗಲಕೋಟೆ ಎಸಿಬಿ ಕಚೇರಿ ಬಿಟ್ಟು ಶಿರೂರ, ಅಮೀನಗಡ ಮಾರ್ಗವಾಗಿ ಹುನಗುಂದಕ್ಕೆ ಬಂದು ಚಿತ್ತವಾಡಗಿ ರಸ್ತೆಯಲ್ಲಿರುವ ಧನ್ನೂರ ಮತ್ತು ಬೆನಕನಡೋಣಿ ಸಾಜಾ ಗ್ರಾಮದ ಮಗ್ಗಲಲ್ಲಿ ವಾಹನಗಳನ್ನು ನಿಲ್ಲಿಸಿ, ದೂರುದಾರರು ಮತ್ತು ನೆರಳು ಸಾಕ್ಷಿ ಗಂಗಾಧರ ಕಲ್ಲಪ್ಪ ಗಸ್ತಿನರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ದೂರುದಾರರ ಹತ್ತಿರ ಇದ್ದ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಳ್ಳಲು ತಿಳಿಸಿ ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ದೂರುದಾರರು ನೆರಳು ಸಾಕ್ಷಿಯೊಂದಿಗೆ ಚಿತ್ತವಾಡಗಿ ರಸ್ತೆಯ ಪಕ್ಕಕ್ಕೆ ಇರುವ ಕಟ್ಟಡದಲ್ಲಿರುವ ಎದುರುದಾರರ ಕಚೇರಿಯ ಒಳಗಡೆ ಹೋಗಿ ನೋಡಲಾಗಿ ಎದುರುದಾರರು ದಿನಂಪ್ರತಿ ಕೂರುವ ಕುರ್ಚಿಯ ಮೇಲೆ ಕುಳಿತಿದ್ದು, ದೂರುದಾರರು ಅವರಿಗೆ ನಮಸ್ಕಾರ ಅಂತ ಹೇಳಿ ಕೆಲಸದ ಬಗ್ಗೆ ವಿಚಾರಿಸಲಾಗಿ, ಎದುರುದಾರರು ಕೆಲಸಾ ಮಾಡ್ತೀನೆ ನೀವು ಭಡಾ ಭಡಾ ಮುಗಿಸಿ ಹೋಗಿ ಬಿಡಬೇಕರಿ ಅಂತ ಹೇಳಿದಾಗ, ದೂರುದಾರರು ಅವರು ಧರಿಸಿದ್ದ ಮುಂಡಾ ಕಿಸೆಯಲ್ಲಿಂದ ಫಿನಾಫ್ತಲೀನ್ ಪೌಡರ ಲೇಪಿತ ಹಣ ತೆಗೆದು ಎದುರುದಾರರಿಗೆ ಕೊಟ್ಟರು. ಆಗ ಎದುರುದಾರರು ಎಷ್ಟು ಅದಾವ ಅಂತ ಕೇಳಿದರು. ಆಗ ದೂರುದಾರರು ಎಣಿಸಿ ನೋಡ್ರಿ ಅಂತ ಹೇಳಿದಾಗ ಅವರು ಎರಡೂ ಕೈಗಳಿಂದ ಹಣವನ್ನು ಎಣಿಸಿ ಅವು 7,000/- ರೂಪಾಯಿ ಇದ್ದ ಬಗ್ಗೆ ಖಾತ್ರಿ ಪಡಿಸಿಕೊಂಡು ತಮ್ಮ ನೀಲಿ ಬಣ್ಣದ ಜೀನ್ಸ್ ಪ್ಯಾಂಟಿನ ಹಿಂದಿನ ಭಾಗದ ಎಡಜೇಬಿನಲ್ಲಿ ಇಟ್ಟುಕೊಂಡರು. ನಂತರ ದೂರುದಾರರು ಟ್ರಾಪ್ ಸಿಬ್ಬಂದಿಗೆ ಕಾಣುವಂತೆ ತಮ್ಮ ಕರವಸ್ತ್ರದಿಂದ ತಮ್ಮ ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಿರುತ್ತಾರೆ ಹಾಗೂ ಪಂಚ-1ರವರು ಸಹ ಹೊರಗಿನ ಕೊಠಡಿಯಲ್ಲಿ ನಿಂತು ಎದುರುದಾರರು ದೂರುದಾರರಿಂದ ಹಣ ಪಡೆದದ್ದನ್ನು ನೋಡಿರುವುದಾಗಿ ತಿಳಿಸಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಎದುರುದಾರರಿದ್ದ ಸ್ಥಳಕ್ಕೆ ಬಂದು ತಮ್ಮ ಗುರುತಿನ ಚೀಟಿ ತೋರಿಸಿ, ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ,

ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಈ ವೇಳೆ ಸದರಿ ಕಚೇರಿಯ 1ನೇ ಕೊಠಡಿಯಲ್ಲಿ ಶ್ರೀ. ಬಂದೇನವಾಜ್ ನೂರಪಾಷಾ ಜಮಾದಾರ, ಗ್ರಾಮ ಲೆಕ್ಕಾಧಿಕಾರಿ, ಕರಡಿ ಸಾಜಾರವರು ಹಾಜರಿದ್ದು, ಅವರಿಗೆ ತನಿಖಾಧಿಕಾರಿಗಳು ನಡೆದ ಘಟನೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಿರುತ್ತಾರೆ. ತನಿಖಾಧಿಕಾರಿಗಳು ಘಟನೆಯ ಕಾಲಕ್ಕೆ ನಡೆದ ವಿದ್ಯಾಮಾನಗಳ ಬಗ್ಗೆ ದೂರುದಾರರನ್ನು ವಿಚಾರಿಸಿದಾಗ ಅವರು ಸದರಿ ಘಟನೆಯ ವಿದ್ಯಾಮಾನಗಳ ಬಗ್ಗೆ ಹೇಳಿದ್ದು, ನೆರಳು ಸಾಕ್ಷಿರವರನ್ನು ವಿಚಾರಿಸಿದಾಗ, ನೆರಳು ಸಾಕ್ಷಿರವರು ಸಹ ದೂರುದಾರರ ಹೇಳಿಕೆಗೆ ಅನುಸರಿಸಿ ನುಡಿದಿದ್ದಲ್ಲದೇ, ಎದುರುದಾರರು ದೂರುದಾರರಿಂದ ಹಣ ಪಡೆದು ಎರಡೂ ಕೈಗಳಿಂದ ಎಣಿಸಿ ತನ್ನ ನೀಲಿ ಬಣ್ಣದ ಜೀನ್ಸ್ ಪ್ಯಾಂಟಿನ ಹಿಂದಿನ ಭಾಗದ ಎಡಕಿಸೆಯಲ್ಲಿ ಇಟ್ಟುಕೊಂಡಿರುವುದನ್ನು ನೋಡಿರುವುದಾಗಿ ತಿಳಿಸಿರುತ್ತಾರೆ. ತದನಂತರ ತನಿಖಾಧಿಕಾರಿಗಳು ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಲು ಎದುರುದಾರರಿಗೆ ತಿಳಿಸಿದಾಗ, ಅವರು ತಮ್ಮ ಜೀನ್ಸ್ ಪ್ಯಾಂಟಿನ ಹಿಂದಿನ ಬಾಗದ ಎಡ ಕಿಸೆಯಲ್ಲಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-1ರವರು ಎದುರುದಾರರ ಪ್ಯಾಂಟಿನ ಎಡಭಾಗದ ಜೇಬಿನಲ್ಲಿದ್ದ ಲಂಚದ ಹಣವನ್ನು ತೆಗೆದು ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಅಮಾನತ್ತು ಪಡಿಸಿ ಸೀಲ್ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ಇದರಿಂದ ಸದರಿ ಎದುರುದಾರರು ದೂರುದಾರರಿಂದ ಲಂಚದ ಹಣ ಸ್ವೀಕರಿಸಿರುವುದು ಧೃಢಪಟ್ಟಿದ್ದರಿಂದ ತನಿಖಾಧಿಕಾರಿಗಳು ಅವರನ್ನು ದಸ್ತಗಿರಿ ಮಾಡಿರುತ್ತಾರೆ.

vi. ತನಿಖಾಧಿಕಾರಿಗಳು ಎದುರುದಾರರನ್ನು ದೂರುದಾರರಿಗೆ ಸಂಬಂಧಿಸಿದ ಕಡತದ ಬಗ್ಗೆ ವಿಚಾರಿಸಲಾಗಿ, ಅವರು ತನ್ನ ಟೇಬಲ್ ಮೇಲೆ ಇರುವ ಒಂದು ಫೈಲನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿ, ಸದರಿ ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಿ, ಅವುಗಳಿಗೆ ಶ್ರೀ. ರುದ್ರಯ್ಯ ಶಿವಸಂಗಯ್ಯ ಹಿರೇಮಠ, ಕಂದಾಯ ನಿರೀಕ್ಷಕರು, ಕರಡಿ ರವರಿಂದ ಧೃಢೀಕರಿಸಿಕೊಂಡು ದಾಖಲಾತಿಗಳನ್ನು ವಶಪಡಿಸಿಕೊಂಡಿರುತ್ತಾರೆ.

vii. ತದನಂತರ ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ನಲ್ಲಿ ಮುದ್ರಣ ಮಾಡಿಕೊಂಡಿದ್ದನ್ನು ಹಾಜರುಪಡಿಸಲು ಸೂಚಿಸಿದ್ದು, ಅದರಂತೆ ದೂರುದಾರರು ವಾಯ್ಸ್ ರೆಕಾರ್ಡ್‌ನ್ನು ಹಾಜರುಪಡಿಸಿದಾಗ, ಅದನ್ನು ಲ್ಯಾಪ್ ಟಾಪ್‌ಗೆ ಅಳವಡಿಸಿ ಸಂಭಾಷಣೆಯನ್ನು ಕೇಳಿಸಿದ್ದು, ಅದರಲ್ಲಿ ಲಂಚದ ಹಣ

ಕುರಿತ ಸಂಭಾಷಣೆ ನಡೆಸಿರುವುದು ಕಂಡು ಬಂದಿದ್ದು, ಅದನ್ನು ಲಿಪಿಕರಣ ಮಾಡಿ ಹಾಗೂ ವಾಯ್ಸ್ ರೆಕಾರ್ಡ್‌ನಿಂದ ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಎದುರುದಾರರು "ನಾನು ವಿಜಯಕುಮಾರ್, ಬಿನ್ ಶಂಕರ ಶಹಾಪೂರಕರ, ಗ್ರಾಮ ಲೆಕ್ಕಾಧಿಕಾರಿ, ಅಡಿಹಾಳ ಗ್ರಾಮ, ಅಡಿಹಾಳ ಗ್ರಾಮದ ಸಂಗಪ್ಪ ಗೌಡರ ವಾಟ್ನಿಗೆ ಬಂದಿದ್ದು, ಸದರಿಯವರು ವಾಟ್ನಿ ಮಾಡಿ ಕೊಡಿ ಅಂತಾ ಒತ್ತಾಯಪೂರ್ವ ಮಾಡಿ ಸದರಿಯವರು ಉದ್ದೇಶಪೂರ್ವ ವೈಯಕ್ತಿಕ ಕಾರಣಗಳಿಂದ ನನಗೆ ಈ ರೀತಿ ಮಾಡಿರುತ್ತಾರೆ. ಅವರಿಗೆ ಎಷ್ಟು ಸಲ ನೀವ ಹೋಗಿ ರೆವಿನ್ಯು ಫೈಲ್ ತೆಗೆದುಕೊಂಡು ಅರ್ಜಿ ಹಾಕಿ ನಕ್ಷೆ ಬಂದ ಮೇಲೆ ನನ್ನ ಕಡೆ ವಂಶಾವಳಿ ತೆಗೆದುಕೊಂಡು ಹೋಗಿ ಅಂತ ಹೇಳಿದ್ದೆ, ಆದರೆ ತಮ್ಮ ವೈಯಕ್ತಿಕ ಕಾರಣಕ್ಕಾಗಿ ಅಂದರೆ ಇವತ್ತು ದಿನಾಂಕ: 27/06/2018 ಭ್ರಷ್ಟಾಚಾರ ನಿಗ್ರಹ ದಳದಿಂದ ನನ್ನ ಮೇಲೆ ವೈಯಕ್ತಿಕ ದ್ವೇಷದ ಕಾರಣದಿಂದ ಈ ರೀತಿ ಮಾಡಿರುತ್ತಾರೆ ಅಂತಾ ಮಾನ್ಯರಲ್ಲಿ ವಿನಂತಿ ಪೂರ್ವಕ ಕೇಳಿಕೊಳ್ಳುತ್ತೇನೆ" ಅಂತಾ ಬರೆದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ವಿಚಾರಿಸಿದಾಗ, ಅವರು ಎದುರುದಾರರ ಹೇಳಿಕೆ ಅಸಂಬಂಧ್ಧವಾಗಿದ್ದು ನಮ್ಮ ಜಮೀನು ವಾಟ್ನಿ ವಿಷಯವಾಗಿ ನಾನು ಯಾವುದೇ ರೀತಿ ಅವರಿಗೆ ಒತ್ತಾಯ ಮಾಡಿರುವುದಿಲ್ಲ ಅವರೇ ನನ್ನ ಕೆಲಸ ಮಾಡಿಕೊಡಲು 15,000/- ಲಂಚ ಬೇಡಿ ಮೊದಲ ಕಂತಾಗಿ 1000/- ರೂ. ಪಡೆದು ಬುಧವಾರ ಇನ್ನೂ 7,000/- ಹಣ ತಂದು ಕೊಟ್ಟರೆ ಮಾತ್ರ ನಿಮ್ಮ ಕೆಲಸ ಮಾಡಿಕೊಡುವುದಾಗಿ ಒತ್ತಾಯಿಸಿದ್ದು, ಅದರಂತೆ ಇಂದು ನಾನು 7,000/- ಹಣವನ್ನು ಅವರಿಗೆ ಕೊಟ್ಟಾಗ ಅವರು ಸ್ವೀಕರಿಸಿ ಎರಡೂ ಕೈಗಳಿಂದ ಎಣಿಸಿ ತಮ್ಮ ಪ್ಯಾಂಟಿನ ಹಿಂಬದಿಯ ಎಡ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ. ಅವರೊಂದಿಗೆ ನನಗೆ ಯಾವುದೇ ವೈಯಕ್ತಿಕ ದ್ವೇಷ ಇತ್ಯಾದಿ ಇರುವುದಿಲ್ಲ ಅಂತ ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ನೆರಳು ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿ ಅವರು ಇಂದು ದೂರುದಾರರು ಎದುರುದಾರರು ಕುಳಿತಿರುವ ಕೊಠಡಿಯಲ್ಲಿ ಹೋಗಿ ಕೆಲಸದ ಬಗ್ಗೆ ವಿಚಾರಿಸಿ ಹಣ ಕೊಟ್ಟಾಗ ಎದುರುದಾರರು ಲಂಚದ ಹಣ ಪಡೆದು ಎರಡೂ ಕೈಗಳಿಂದ ಎಣಿಸಿ ಪ್ಯಾಂಟಿನ ಹಿಂಬದಿಯ ಎಡಕಿಸೆಯಲ್ಲಿ ಇಟ್ಟುಕೊಂಡಿದ್ದು, ದೂರುದಾರರು ಯಾವುದೇ ಒತ್ತಾಯ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ನಲ್ಲಿ ಮುದ್ರಣ ಮಾಡಿಕೊಂಡಿದ್ದನ್ನು ಲ್ಯಾಪ್ ಟಾಪ್‌ಗೆ ಅಳವಡಿಸಿ ಅದರ ಮೂಲಕ ಲಿಪಿಕರಣ ಮಾಡಿ ಅದನ್ನು ಎದುರುದಾರರಿಂದ ಓದಿಸಿ ಅವರ ಧ್ವನಿಯನ್ನು ಹಾಗೂ

ದೂರುದಾರರಿಂದಲೂ ಸಹ ಓದಿಸಿ ಅವರ ಧ್ವನಿಯನ್ನು ಸಹಾ ವಾಯ್ಸ್ ರೆಕಾರ್ಡ್‌ನಿಂದ ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಗಳು ಸದರಿ ಸಿಡಿಗಳಲ್ಲಿದ್ದ ಸಂಭಾಷಣೆಯನ್ನು ಶ್ರೀ. ರುದ್ರಯ್ಯ ಶಿವಸಂಗಯ್ಯ ಹಿರೇಮಠ, ಕಂದಾಯ ನಿರೀಕ್ಷಕರು, ಕರಡಿ ರವರಿಗೆ ಕೇಳಿಸಿದಾಗ, ಅವರು ಎದುರುದಾರರ ಧ್ವನಿಯನ್ನು ಗುರ್ತಿಸಿ ಅದನ್ನು ತನಿಖಾಧಿಕಾರಿಗಳು ಧೃಢೀಕರಿಸಿಕೊಂಡು ವಶಪಡಿಸಿಕೊಂಡಿರುತ್ತಾರೆ.

ix. ತನಿಖಾಧಿಕಾರಿಗಳು ಎದುರುದಾರರಿಗೆ ಮತ್ತೊಂದು ಪ್ಯಾಂಟಿನ ವ್ಯವಸ್ಥೆ ಮಾಡಿದ್ದು, ಸದರಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟಿನ ಎಡಭಾಗದ ಜೇಬನ್ನು ಹೊರಮಗ್ಗಲು ಮಾಡಿ ತನಿಖಾಧಿಕಾರಿಗಳು ಮತ್ತೊಂದು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ಪ್ಯಾಂಟನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 27/06/2018ರಂದು ಹುನಗುಂದಕ್ಕೆ ಪಟ್ಟಣದ ಚಿತ್ತವಾಡಗಿ ರಸ್ತೆಯಲ್ಲಿರುವ ಧನ್ನೂರ ಸಾಜಾ ಗ್ರಾಮ ಲೆಕ್ಕಾಧಿಕಾರಿಯವರ ಕಚೇರಿಯ ಕೊಠಡಿಯಲ್ಲಿ ಸಮಯ 13-15 ಗಂಟೆಯಿಂದ 16-45 ಗಂಟೆಯವರೆಗೆ ತನಿಖಾಧಿಕಾರಿಗಳು ಉಕ್ತಲೇಖನ ಕೊಟ್ಟು ಲ್ಯಾಪ್ ಟಾಪ್‌ನಲ್ಲಿ ಟ್ರಾಪ್ ಮಹಜರ್‌ನ್ನು ಬೆರಳಚ್ಚು ಮಾಡಿಸಿರುತ್ತಾರೆ.

x. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ದ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ಎದುರುದಾರರ ಎರಡೂ ಕೈಬೆರಳುಗಳನ್ನು ಹಾಗೂ ಎದುರುದಾರರು ಧರಿಸಿದ್ದ ನೀಲಿ ಬಣ್ಣದ ಜೀನ್ಸ್ ಪ್ಯಾಂಟಿನ ಜೇಬನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂದಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

xi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ

ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 29/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನು ದೂರುದಾರನ ಕೆಲಸ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ. ಕರ್ನಾಟಕ ಕಂದಾಯ ಅಧಿನಿಯಮದ ಪ್ರಕಾರ ತಹಶೀಲ್ದಾರ್ ಕಾರ್ಯಾಲಯದಿಂದ ನಮೂನೆ–21 ನಿಯಮ 65 ಜನರೇಟ್ ಆಗಿಬಂದ ನಂತರ ಹಕ್ಕು ಬದಲಾವಣೆ ಮಾಡಿದವರ ಹಾಗೂ ಹಕ್ಕು ಬದಲಾವಣೆ ಪಡೆದವರ ರುಜುಗಳನ್ನು ತೆಗೆದುಕೊಂಡು ರಾಜಸ್ವ ನಿರೀಕ್ಷಕರಿಗೆ ಕಳುಹಿಸುವುದು ಮಾತ್ರ ತನ್ನ ಕರ್ತವ್ಯವಾಗಿದೆ. ತಾನು ದೂರುದಾರರಿಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ತನ್ನ ಕಬ್ಜೆಯಿಂದ ತನಿಖಾಧಿಕಾರಿಗಳಿಗೆ ಕೊಟ್ಟಿರುವುದಿಲ್ಲ, ಪಂಚನಾಮೆಯಲ್ಲಿ ಬರೆದ ನಡವಳಿಕೆಗಳು ಸುಳ್ಳು ಹಾಗೂ ಖೊಟ್ಟಿಯಾಗಿ ತನಿಖಾಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬರೆದಿರುತ್ತಾರೆ. ತಾನು ಘಟನೆಯ ದಿವಸವೇ ತಡಮಾಡದೆ ತಮ್ಮ ಹೇಳಿಕೆಯಲ್ಲಿ ಹೇಳಿದ ಹಾಗೆ ದೂರುದಾರಲ್ಲಿಗೆ ಹೋಗಿ 11–ಇ ನಕ್ಷೆ ತಯಾರಿಸಿ, ಅರ್ಜಿ ಹಾಕಿದೆ ಅಂತಾ ಹೇಳಿದ್ದು, ಒತ್ತಾಯಪೂರ್ವಕವಾಗಿ ಹಣ ಕೊಟ್ಟು ತನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ತಾನು ನಿರಪರಾಧಿ ಇರುತ್ತೇನೆ. ಘಟನಾವಳಿಯ ಬಗ್ಗೆ ತನಿಖಾಧಿಕಾರಿಗಳು ವಿಚಾರಿಸದೆ ಹಾಗೂ ಅವಲೋಕಿಸದೆ, ತಮ್ಮ ಅಂಕಿಅಂಶಕ್ಕೋಸ್ಕರ ತನ್ನ ಮೇಲೆ ಸುಳ್ಳು ಫಿರ್ಯಾದಿಯನ್ನು ದಾಖಲಿಸಿಕೊಂಡು ದೋಷಾರೋಪಣಾಪಟ್ಟಿಯನ್ನು ಮಾನ್ಯ ವಿಶೇಷ ಸತ್ರ ನ್ಯಾಯಾಲಯ, ಬಾಗಲಕೋಟದಲ್ಲಿ ವಿ.ಮೊ.ಸಂ.03/2019ರಲ್ಲಿ ದಾಖಲಿಸಿದ್ದಾರೆ. ಸದರಿ ಮೊಕದ್ದಮೆ ಚಾಲ್ತಿಯಲ್ಲಿದ್ದು, ಅದರಲ್ಲಿಯ ದೋಷಾರೋಪಣೆ ಹಾಗೂ ಈ ಇಲಾಖಾ ವಿಚಾರಣೆಯಲ್ಲಿ ನಡೆಸುವ ದೋಷಾರೋಪಣೆಗಳು ಒಂದೇ ಆಗಿದ್ದು, ವಿ.ಮೊ.ಸಂ.03/2019ನ್ನು ನಿರ್ಣಯ ಆಗುವವರೆಗೆ ಇಲಾಖಾ ವಿಚಾರಣೆಯನ್ನು ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಾರದು ತಡೆಹಿಡಿಯಬೇಕು. ತಾನು ಅಧಿಕಾರದ ವ್ಯಾಮೋಹ ತೋರಿಸಲು ಫಿರ್ಯಾದಿಯಿಂದ ಲಂಚದ ರೂಪದಲ್ಲಿ ಹಣವನ್ನು ಕೇಳಿರುವುದಿಲ್ಲ ಹಾಗೂ ಸ್ವೀಕರಿಸಿರುವುದಿಲ್ಲ. ಈ ಹಿಂದೆ ತನ್ನ ಮೇಲೆ ಯಾವುದೇ ಗುರುತರವಾದ ಕ್ರಿಮಿನಲ್ ಮೊಕದ್ದಮೆಗಳು ತನ್ನ ಸೇವಾ ಮಾಹಿತಿಯಲ್ಲಿ

ಲಭ್ಯವಿರುವುದಿಲ್ಲ. ತಾನು ಸಾರ್ವಜನಿಕ ನೌಕರನಾಗಿ ಹಾಗೂ ನಿಷ್ಠಾವಂತ ನೌಕರನಾಗಿ ಸೇವೆ ಸಲ್ಲಿಸಿರುತ್ತೇನೆ. ಕಾರಣ ತನ್ನ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಾರದು" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

14/2

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**